ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪ್ರದೀಪ್ ಸಿಂಗ್ ಯರೂರ್

ಮೆ:ಜೆ.ಕೆ. ಸಿಮೆಂಟ್ ಅಮಿಟೆಡ್, ಬಾಗಲಕೋಟೆ -ವಿರುದ್ಧ ಕರ್ನಾಟಕ ರಾಜ್ಯ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 52904/2016 (ಜಿಎಮ್-ಎಮ್ಎಮ್-ಎಸ್), ದಿನಾಂಕ 19 ನೇ ನವೆಂಬರ್, 2019

ಆಜ್ಞೆ

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

1. ಈ ಹಿಂದಿನ ದಿನಾಂಕದಂದು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ನಾವು ಆಲಿಸಿದ್ದೇವೆ.ನಿವೇದನೆಗಳ ಗುಣಾರ್ಹತೆಗಳ ದೃಷ್ಟಿಯಿಂದ, ಮೊಕದ್ದಮೆಯ ವಾಸ್ತವ ಸಂಗತಿಯನ್ನು ಪರಿಗಣಿಸಬೇಕಾಗುತ್ತದೆ.

2. 1978 ರಲ್ಲಿ ಮೈಸೂರ್ ಮಿನರಲ್ಸ್ ಲಿಮಿಟೆಡ್ಗೆ ಮೊದಲನೇ ಪ್ರತ್ಯರ್ಜಿದಾರರು ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಿದ್ದರು; 21 ನೇ ನವಂಬರ್, 1998 ರಿಂದ ಇಪ್ಪತ್ತು ವರ್ಷಗಳ ಅವಧಿಗಾಗಿ ಅದನ್ನು 5 ನೇ ಏಪ್ರಿಲ್, 2002 ರಂದು ನವೀಕರಿಸಲಾಗಿತ್ತು.ಮೈಸೂರ್ ಮಿನರಲ್ಸ್ ಲಿಮಿಟೆಡ್ಗೆ ಮಂಜೂರು ಮಾಡಿದ ಗುತ್ತಿಗೆಯು, 687.97 ಎಕರೆಗಳಷ್ಟು ದೊಡ್ಡ ವಿಸ್ತೀರ್ಣಕ್ಕೆ ಸಂಬಂಧಿಸಿದ್ದಾಗಿತ್ತು.29 ನೇ ಆಗಸ್ಟ್, 2002 ರ ವರ್ಗಾವಣೆ ಪತ್ರದ ಕಾರಣದಿಂದಾಗಿ, 687.97 ಎಕರೆಗಳ ಪೈಕಿ 307 ಎಕರೆಗಳ ಗುತ್ತಿಗೆ ವಿಸ್ತೀರ್ಣದ ಭಾಗವನ್ನು ಅರ್ಜಿದಾರರಿಗೆ ವರ್ಗಾಯಿಸಲಾಗಿತ್ತು.

3. 3 ನೇ ಏಪ್ರಿಲ್, 2008 ರಂದು, ಮೂರನೇ ಪ್ರತ್ಯರ್ಜಿದಾರ ಕಂಪನಿಯು ( ಈ ಹಿಂದೆ ಶ್ರೀ ನಂದಿ ಮೈನಿಂಗ್ ಕಂಪನಿ ಪ್ರೈವೇಟ್ ಲಿಮಿಟೆಡ್), ಅರ್ಜಿದಾರರಿಗೆ ಮಂಜೂರು ಮಾಡಿದ ಗುತ್ತಿಗೆ ವಿಸ್ತೀರ್ಣದ ಪೈಕಿ 37.77 ಎಕರೆಗಳಷ್ಟು ಪ್ರದೇಶವು ಅತಿಕ್ರಮಿತವಾದ ಪ್ರದೇಶವೆಂದು ತೋರಿಸುವ ಮೂಲಕ ರಾಜ್ಯ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿತು.ಖನಿಜ ರಿಯಾಯಿತಿ ನಿಯಮಗಳು, 1960 ರ (ಸಂಕ್ಷಿಪ್ತವಾಗಿ " 1960 ರ ಸದರಿ ನಿಯಮಗಳು ") 22 ನೇ ನಿಯಮವನ್ನು ಅನ್ವಯಿಸಿ ಸದರಿ ಪ್ರದೇಶದ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಮೂರನೇ ಪ್ರತ್ಯರ್ಜಿದಾರರು ಅರ್ಜಿ ಸಲ್ಲಿಸಿದ್ದರು.ಈ ಅರ್ಜಿಯಲ್ಲಿ, 37.77 ಎಕರೆಗಳ ಪ್ರದೇಶವು ಪಟ್ಟಾ ಭೂಮಿಯಾಗಿದ್ದು ಪಟ್ಟಾದಾರರ ಸಮ್ಮತಿಯನ್ನು ಲಗತ್ತಿಸಲಾಗಿತ್ತು ಎಂಬ ವಿಷಯವನ್ನು ಮೆ: ತಿಳಿಸಿದ್ದಾರೆ.ಸದರಿ ಅರ್ಜಿಯ ಆಧಾರದ ಮೇಲೆ, ರಾಜ್ಯ ಸರ್ಕಾರವು, ಮೈಸೂರು ಮಿನರಲ್ಸ್ ಲಿಮಿಟೆಡ್ಗೆ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಿರುವುದರಿಂದ, 37.77 ಎಕರೆಗಳ ಸದರಿ ಪ್ರದೇಶವವನ್ನು ಪ್ರತ್ಯೇಕಿಸಬೇಕು ಎಂದು ನಿರ್ದೇಶಿಸಿ, 5 ನೇ ಜನವರಿ, 2010 ರ ಆದೇಶವನ್ನು ಹೊರಡಿಸಿತ್ತು.ರಾಜ್ಯ ಸರ್ಕಾರದ ಆದೇಶದಿಂದ ಬಾಧಿತರಾಗಿ ಪ್ರಸ್ತುತ ಅರ್ಜಿದಾರರು ಪುನರ್ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದರು.ಪುನರ್ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಿ, 5 ನೇ ಜನವರಿ, 2010 ರ ಆದೇಶವನ್ನು ತಳ್ಳಿಹಾಕಲಾಯಿತು.ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸುವ ಮೂಲಕ ಮೂರನೇ ಪ್ರತ್ಯರ್ಜಿದಾರರು, ಪುನರ್ಪರಿಶೀಲನಾ ಅರ್ಜಿಯಲ್ಲಿನ ಆದೇಶವನ್ನು ಪ್ರಶ್ನಿಸಿದರು.5 ನೇ ಜೂನ್, 2015 ರ ಆದೇಶದ ಮೂಲಕ, ಈ ನ್ಯಾಯಾಲಯದ ವಿಭಾಗೀಯ ಪೀಠವು, ರಾಜ್ಯ ಸರ್ಕಾರ ಮತ್ತು ಪುನರ್ಪರಿಶೀಲನಾ ಪ್ರಾಧಿಕಾರಗಳೆರಡರ ಆದೇಶಗಳನ್ನು ತಳ್ಳಿಹಾಕಲು ಕ್ರಮ ಜರುಗಿಸಿತು ಹಾಗೂ ಹೊಸ ಆದೇಶವನ್ನು ಹೊರಡಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತು.ಸದರಿ ಆದೇಶದ ಆಧಾರದ ಮೇಲೆ,ದಿನಾಂಕ: 14 ನೇ ಸೆಪ್ಟೆಂಬರ್, 2016 ರ ಆದೇಶವನ್ನು (ಅನುಬಂಧ-ಎ) ರಾಜ್ಯ ಸರ್ಕಾರವು ಹೊರಡಿಸಿದ್ದು, ಅದನ್ನು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

4. ಪ್ರಶ್ನಿತ ಆದೇಶದ ಮೂಲಕ, 37.77 ಎಕರೆಗಳ ವಿಸ್ತೀರ್ಣದ ಪ್ರದೇಶಕ್ಕೆ ಸಂಬಂಧಿಸಿದ ಅರ್ಜಿದಾರರ ಗಣಿಗಾರಿಕೆ ಗುತ್ತಿಗೆಯನ್ನು ರದ್ದುಗೊಳಿಸಲಾಯಿತು ಹಾಗೂ ಸದರಿ ಪ್ರದೇಶವನ್ನು ಗಣಿಗಾರಿಕೆ ಗುತ್ತಿಗೆಯಿಂದ ತೆಗೆಯಬೇಕೆಂದು ಆದೇಶಿಸಲಾಯಿತು.ಗಣಿಗಾರಿಕೆ ಗುತ್ತಿಗೆ ಮಂಜೂರಾತಿಗಾಗಿ ಮೂರನೇ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಯನ್ನು, ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 ರ (ಸಂಕ್ಷಿಪ್ತವಾಗಿ 1957 ರ ಸದರಿ ಅಧಿನಿಯಮ ') 10 ಎ ಪ್ರಕರಣದ ( 1) ನೇ ಉಪ-ಪ್ರಕರಣದ ಹಿನ್ನೆಲೆಯಲ್ಲಿ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಮೂರನೇ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಅನರ್ಹಗೊಳಿಸಬೇಕೆಂದು ನಿರ್ಣಯಿಸಲಾಯಿತು.ಇದಲ್ಲದೆ, ಖನಿಜಗಳ (ಹರಾಜು) ನಿಯಮಗಳು, 2015 ರ 10 ಬಿ ನಿಯಮದ ಅಡಿಯಲ್ಲಿ ಹರಾಜು ಮೂಲಕ 37.77 ಎಕರೆಗಳ ಸದರಿ ಪ್ರದೇಶದ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ವಿಲೆ ಮಾಡಲು ನಿರ್ದೇಶನ ನೀಡಲಾಯಿತು.ಇದಲ್ಲದೆ, ಒಮ್ಮೆ ಹರಾಜು ನಡೆದರೆ, ಪಟ್ಟಾದಾರರೆಂದು ಕ್ಲೇಮು ಮಾಡುವ ಮೂರನೇ ಪಕ್ಷಕಾರರು ಹರಾಜು ಖರೀದಿದಾರರಿಗೆ ಸಮ್ಮತಿ ನೀಡಬೇಕಾಗುತ್ತದೆ ಎಂದು ಅಭಿಪ್ರಾಯಪಡಲಾಯಿತು.ಸಮ್ಮತಿ ನೀಡಲು ನಿರಾಕರಿಸಿದ ನಂತರ ಗಣಿಗಾರಿಕೆ ಗುತ್ತಿಗೆದಾರರು, ಸದರಿ 37.77 ಎಕರೆಗಳ ಪ್ರದೇಶದ (ಸಂಕ್ಷಿಪ್ತವಾಗಿ ' ಸದರಿ ಪ್ರದೇಶ ') ಆರ್ಜನೆಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದು ಸಹ ಅಭಿಪ್ರಾಯಪಡಲಾಯಿತು.

5. ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, 1957 ರ ಸದರಿ ಅಧಿನಿಯಮದ ಮತ್ತು 1960 ರ ಸದರಿ ನಿಯಮಗಳ ಉಪಬಂಧಗಳ ಕಡೆಗೆ ನಮ್ಮ ಗಮನ ಸೆಳೆದರು.ಅವರು, 1957 ರ ಸದರಿ ಅಧಿನಿಯಮದ 24 ಎ ಪ್ರಕರಣದೆಡೆಗೆ ನ್ಯಾಯಾಲಯದ ಗಮನ ಸೆಳೆದರು.1960 ರ ಸದರಿ ನಿಯಮಗಳ ವಿವಿಧ ಉಪಬಂಧಗಳ ಕಡೆಗೆ ಮತ್ತು ನಿರ್ದಿಷ್ಟವಾಗಿ 1960 ರ ಸದರಿ ನಿಯಮಗಳ 22 ನೇ ನಿಯಮದ ( 3) ನೇ ಉಪ-ನಿಯಮದ (ಹೆಚ್) ಖಂಡದ ಕಡೆಗೆ ಸಹ ಅವರು ನ್ಯಾಯಾಲಯದ ಗಮನ ಸೆಳೆದರು.ರಾಜ್ಯ ಸರ್ಕಾರದಲ್ಲಿ ಖನಿಜಗಳು ನಿಹಿತವಾಗಿರುವ ಖಾಸಗಿ ಭೂಮಿಯ ಅಥವಾ ಪಟ್ಟಾ ಭೂಮಿಯ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಲಾಗಿದ್ದ ಸಂದರ್ಭದಲ್ಲಿ, ಗುತ್ತಿಗೆ ಪತ್ರವನ್ನು ಬರೆದ ನಂತರ ಗಣಿಗಾರಿಕೆ ಕಾರಾಚರಣೆಗಳನ್ನು ವಾಸ್ತವವಾಗಿ ಪ್ರಾರಂಭಿಸಲು ಮಾಲೀಕನ ಅಥವಾ ಪಟ್ಟೆದಾರನ ಸಮ್ಮತಿಯನ್ನು ಒದಗಿಸಬಹುದಾಗಿದೆ ಎಂಬುದಾಗಿ (ಹೆಚ್) ಖಂಡದ ಎರಡನೇ ಪರಂತುಕವು ಸೂಚಿಸುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಆದುದರಿಂದ, ಮೂರನೇ ಪ್ರತ್ಯರ್ಜಿದಾರರ ಸಮ್ಮತಿ ಇಲ್ಲದಿದ್ದ ಕಾರಣದಿಂದ, ಗುತ್ತಿಗೆಯಿಂದ 37.77 ಎಕರೆಗಳ ಸದರಿ ಪ್ರದೇಶವನ್ನು ಬಿಟ್ಟುಬಿಡುವುದು ಅವಶ್ಯವಿರಲಿಲ್ಲವೆಂದು ಮತ್ತು ಯಾವುದೇ ಸಂದರ್ಭದಲ್ಲಿ, ಅಷ್ಟರಮಟ್ಟಿಗೆ, ಪ್ರಶ್ನಿತ ಆದೇಶವು ಕಾನೂನುಬಾಹಿರವಾದುದಾಗಿದೆ ಎಂದು ಅವರು ನಿವೇದಿಸಿಕೊಳ್ಳಬಹುದಾಗಿತ್ತು.1957 ರ ಸದರಿ ಅಧಿನಿಯಮದ 24 ಎ ಪ್ರಕರಣದೆಡೆಗೆ ನಮ್ಮ ಗಮನವನ್ನು ಸೆಳೆದು, ಅವರು ಸದರಿ ಪ್ರದೇಶದಲ್ಲಿನ ಖನಿಜಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿವೆ ಎಂಬ ಬಗ್ಗೆ ಯಾವುದೇ ವಿವಾದವಿಲ್ಲ ಮತ್ತು ಹಾಗಾಗಿ, ಮೂರನೇ ಪ್ರತ್ಯರ್ಜಿದಾರರಿಗೆ ಸಂದಾಯ ಮಾಡಬಹುದಾದ ಪರಿಹಾರವನ್ನು 72 ನೇ ನಿಯಮದೊಂದಿಗೆ ಓದಲಾಗುವ 24 ಎ ಪ್ರಕರಣದ ( 2) ನೇ ಉಪ ಪ್ರಕರಣಕ್ಕನುಸಾರವಾಗಿ ನಿರ್ಧರಿಸಬೇಕಾಗುತ್ತದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, ಸದರಿ ಪ್ರದೇಶದಲ್ಲಿನ ಖನಿಜಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವುದರಿಂದ, ಪರಿಹಾರದ ಸಂದಾಯಕ್ಕೆ ಪ್ರತಿಯಾಗಿ, ಅರ್ಜಿದಾರನು ಸದರಿ ಪ್ರದೇಶದಲ್ಲಿ ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸಲು ಹಕ್ಕುಳ್ಳವರಾಗುತ್ತಾರೆ ಎಂದು ನಿವೇದಿಸಿಕೊಂಡಿದ್ದಾರೆ.ಖನಿಜಗಳು ರಾಜ್ಯದಲ್ಲಿ ನಿಹಿತವಾಗಿರುವುದರಿಂದ, ರಾಜ್ಯದಿಂದ ಗುತ್ತಿಗೆ ಮಂಜೂರಾತಿ ಪಡೆದ ಅರ್ಜಿದಾರರನ್ನು ಗಣಿಗಾರಿಕೆ ಕಾರಾಚ ರಣೆಗಳನ್ನು ನಡೆಸುವ ಅವ ಕಾಶ ದಿ ಂ ದ ವಂಚಿತನಾಗಿಸಲಾಗುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

6. ಪ್ರಶ್ನಿತ ಆದೇಶವನ್ನು ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು ಸಮರ್ಥಿಸಿಕೊಂಡಿದ್ದಾರೆ.ಮೂರನೇ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು ಸಹ ಪ್ರಶ್ನಿತ ಆದೇಶವನ್ನು ಸಮರ್ಥಿಸಿಕೊಂಡಿದ್ದಾರೆ.25 ಎ ಪ್ರಕರಣದ ( 2) ನೇ ಉಪ-ಪ್ರಕರಣವು, ಪರವಾನಗಿ ಅಥವಾ ಗುತ್ತಿಗೆಯನ್ನು ಮಂಜೂರು ಮಾಡಲಾಗಿರುವ ಸಂಬಂಧದ ಭೂಮಿಯ ಅಧಿಭೋಗದಾರರನ್ನು ಕುರಿತು ವ್ಯವಹರಿಸುತ್ತದೆ ಮತ್ತು ಮೂರನೇ ಪ್ರತ್ಯರ್ಜಿದಾರನಿಗೆ ಸಂಬಂಧಪಡುವಷ್ಟರಮಟ್ಟಿಗೆ, 37.77 ಎಕರೆಗಳ ಅಳತೆಯ ಸದರಿ ಭೂಮಿಯು, ಮೂರನೇ ಪ್ರತ್ಯರ್ಜಿದಾರರಲ್ಲಿ ನಿಹಿತವಾಗಿದೆ ಎಂಬ ವಿಷಯದ ಕಡೆ ಅವರು ಗಮನ ಸೆಳೆದಿರುವರು.1957 ರ ಸದರಿ ಅಧಿನಿಯಮದ 24 ಎ ಪ್ರಕರಣದ ( 2) ನೇ ಉಪ-ಪ್ರಕರಣ ಮತ್ತು ತತ್ಪರಿಣಾಮದ 1960 ರ ಸದರಿ ನಿಯಮಗಳ 72 ನೇ ನಿಯಮವು ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗುವುದಿಲ್ಲವೆಂದು ಅವರು

ನಿವೇದಿಸಿಕೊಂಡಿದ್ದಾರೆ.1960 ರ ಸದರಿ ನಿಯಮಗಳ 37 ನೇ ನಿಯಮದ ಕಡೆಗೆ ಅವರು ನಮ್ಮ ಗಮನ ಸೆಳೆದು, 1960 ರ ಸದರಿ ನಿಯಮಗಳ 37 ನೇ ನಿಯಮದ ಅಡಿಯಲ್ಲಿ ಗುತ್ತಿಗೆಯ ಭಾಗದ ವರ್ಗಾವಣೆಯು ಅನುಮತೀಯವಲ್ಲವೆಂದು, ಆದ್ದರಿಂದ, ಅರ್ಜಿದಾರರ ಹೆಸರಿಗೆ ಮಾಡಿರುವ ವರ್ಗಾವಣೆಂತು ಕಾನೂನುಬಾಹಿರವಾದುದಾಗಿದೆ ಎಂದು ಅವರು ವಾದಿಸಿದ್ದಾರೆ.

7. ನಿವೇದನೆಗಳನ್ನು ನಾವು ಎಚ್ಚರಿಕೆಯಿಂದ ಪರಿಗಣಿಸಿದ್ದೇವೆ.1957 ರ ಸದರಿ ಅಧಿನಿಯಮದ ಮತ್ತು 1960 ರ ಸದರಿ ನಿಯಮಗಳ ಉಪಬಂಧಗಳನ್ನು ನಾವು ಅವಲೋಕಿಸಿದ್ದೇವೆ.1960 ರ ಸದರಿ ನಿಯಮಗಳ ಎಚ್ಚರಿಕೆಯ ಪರಿಶೀಲನೆಯಿಂದ, ಬೇರೆ ಬೇರೆ ಪ್ರವರ್ಗಗಳ ಭೂಮಿಗಳ ಸಂಬಂಧದಲ್ಲಿನ ಗಣಿಗಾರಿಕೆ ಗುತ್ತಿಗೆಗಳ ಮಂಜೂರಾತಿ ಕುರಿತು ಈ ನಿಯಮಗಳು ವ್ಯವಹರಿಸುತ್ತವೆ ಎಂಬುದು ಕಂಡುಬರುತ್ತದೆ.ಉದಾಹರಣೆಗೆ, ಸರ್ಕಾರದಲ್ಲಿ ನಿಹಿತವಾದ ಖನಿಜಗಳಿರುವ ಭೂಮಿಯ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಗಳ ಮಂಜೂರಾತಿ ಕುರಿತು ಅಧ್ಯಾಯ-IV ವ್ಯವಹರಿಸುತ್ತದೆ.ಸರ್ಕಾರವನ್ನು ಹೊರತುಪಡಿಸಿ, ಇತರ ವ್ಯಕ್ತಿಗಳಲ್ಲಿ ನಿಹಿತವಾದ ಖನಿಜಗಳಿರುವ ಭೂಮಿಯ ಸಂಬಂಧದಲ್ಲಿನ ಶೋಧನಾ ಪರವಾನಗಿ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ಪಡೆಯುವುದಕ್ಕಾಗಿನ ಪ್ರಕ್ರಿಯೆ ಕುರಿತು ಅಧ್ಯಾಯ- V ವ್ಯವಹರಿಸುತ್ತದೆ.ಪಟ್ಟಾ ಭೂಮಿ ಅಥವಾ ಖಾಸಗಿ ಮಾಲಿಕತ್ವದ ಭೂಮಿಯಾಗಿರಬಹುದಾದ ಭೂಮಿಯ ಸಂದರ್ಭದಲ್ಲಿ ಅಧ್ಯಾಯ-IV ರ ಉಪಬಂಧಗಳು ಅನ್ವಯವಾಗುತ್ತವೆಯಾದರೂ, ಅದರಲ್ಲಿನ ಖನಿಜಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುತ್ತವೆ.ಪ್ರಸ್ತುತ ಮೊಕದ್ದಮೆಯು ಅಧ್ಯಾಯ-IV ರ ಮೂಲಕ ನಿಯಂತ್ರಿತವಾಗುತ್ತದೆ.22 ನೇ ನಿಯಮದ ( 3) ನೇ ಉಪ-ನಿಯಮವು, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ ಅಥವಾ ನವೀಕರಣಕ್ಕೆ ಅನ್ವಯವಾಗುವ ಅನುಬಂಧಗಳು ಏನಾಗಿರಬೇಕು ಎಂಬುದನ್ನು ತಿಳಿಸುತ್ತದೆ.(ಹೆಚ್) ಖಂಡವು ಒಂದು ಅಗತ್ಯತೆಯಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

" (ಹೆಚ್) ಭೂಮಿಯ ಮಾಲೀಕತ್ವವನ್ನು ಅರ್ಜಿದಾರನು ಹೊಂದಿದ್ದು, ಆ ಭೂಮಿಯ ಹೊರಮೈ ವಿಸ್ತೀರ್ಣದ ಮೇಲಿನ ಹಕ್ಕುಗಳನ್ನು ಹೊಂದಿದ್ದಲ್ಲಿ ಅಥವಾ ಗಣಿಗಾರಿಕೆ ಕಾರಾಚರಣೆಗಳನ್ನು ಪ್ರಾರಂಭಿಸಲು ಮಾಲೀಕನ ಸಮ್ಮತಿಯನ್ನು ಪಡೆದಿದ್ದಲ್ಲಿ, ಆತನ ಲಿಖಿತದಲ್ಲಿನ ಹೇಳಿಕೆ:

ಪರಂತು, ಭೂಮಿಯು ಸರ್ಕಾರಿ ಮಾಲಿಕತ್ವದ್ದಾಗಿದ್ದಲ್ಲಿ, ಅಂಥ ಯಾವುದೇ ಹೇಳಿಕೆಯು ಅಗತ್ಯವಿರುವುದಿಲ್ಲ:

**ಭಾಗದಲ್ಲಿ ಗಣಿಗಾರಿಕೆ ಕಾರಾಚರಣೆಗಳನ್ನು ಪ್ರಾರಂಭಿಸುವುದಕ್ಕಾಗಿ** ಮಾಲೀಕನ ಅಂಥ ಸಮ್ಮತಿಯನ್ನು , ಗುತ್ತಿಗೆ ಪತ್ರವನ್ನು ಬರೆದುಕೊಟ್ಟ ನಂತರ , ಆದರೆ ಸದರಿ ಪ್ರದೇಶದಲ್ಲಿ ಪ್ರವೇಶಿಸುವುದಕ್ಕೆ ಮುಂಚೆ ಒದಗಿಸಬಹುದು

ಮತ್ತೂ ಪರಂತು, ಗುತ್ತಿಗೆಯ ಮಂಜೂರಾತಿ ಅವಧಿಯಲ್ಲಿ ಈಗಾಗಲೇ ಸಮ್ಮತಿಯನ್ನು ಪಡೆದಿದ್ದಲ್ಲಿ, ನವೀಕರಣದ ಸಂದರ್ಭದಲ್ಲಿ ಮತ್ತೆ ಸಮ್ಮತಿ ಪಡೆಯುವ ಅಗತ್ಯವಿರುವುದಿಲ್ಲ." (ಒತ್ತು ನೀಡಲಾಗಿದೆ)

ಆದ್ದರಿಂದ, ಭೂಮಿಯು ಖಾಸಗಿ ಮಾಲೀಕತ್ವದ್ದಾಗಿದ್ದು, ಅದರಲ್ಲಿನ ಖನಿಜಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿದ್ದ ಸಂದರ್ಭದಲ್ಲಿ, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿ ಕೋರುವ ಅರ್ಜಿಯಲ್ಲಿ, ಗಣಿಗಾರಿಕೆ ಕಾರಚಟುವಟಿಕೆಗಳನ್ನು ಪ್ರಾರಂಭಿಸಲು ಮಾಲೀಕನ ಸಮ್ಮತಿ ಪಡೆದುಕೊಂಡಿರುವುದಾಗಿ ಅರ್ಜಿದಾರನು ಒಂದು ಹೇಳಿಕೆಯನ್ನು ಸಲ್ಲಿಸಬೇಕಾದ ಅಗತ್ಯವಿದೆ.(ಹೆಚ್) ಖಂಡದ ಮೊದಲನೇ ಪರಂತುಕದಲ್ಲಿ, ರಾಜ್ಯ ಸರ್ಕಾರವು ಭೂಮಿಯ ಮಾಲೀಕತ್ವ ಹೊಂದಿದ್ದಾಗ, ಅಂಥ ಯಾವುದೇ ಹೇಳಿಕೆ ಅವಶ್ಯವಿರತಕ್ಕದ್ದಲ್ಲವೆಂದು ಹೇಳಲಾಗಿದೆ.ಈ ಸಂದರ್ಭದಲ್ಲಿ ಎರಡನೇ ಪರಂತುಕವು ಮುಖ್ಯವಾದುದಾಗಿದೆ.ಗುತ್ತಿಗೆ ಪತ್ರವನ್ನು ಬರೆದ ನಂತರ, ಗುತ್ತಿಗೆ ಪಡೆದ ಪ್ರದೇಶಕ್ಕೆ ಪ್ರವೇಶಿಸುವ ಮೊದಲು ಮಾಲೀಕನ ಸಮ್ಮತಿಯನ್ನು ಒದಗಿಸಬಹುದೆಂದು ಅದು ಉಪಬಂಧಿಸುತ್ತದೆ.ಹಾಗಾಗಿ, ಸರ್ಕಾರದಲ್ಲಿ ಖನಿಜಗಳು ನಿಹಿತವಾಗಿರುವ ಖಾಸಗಿ ಮಾಲೀಕತ್ವದ ಭೂಮಿಯ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ, 22 ನೇ ನಿಯಮದ ( 1) ನೇ ಉಪ-ನಿಯಮದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಪ್ರಸ್ತುತ ಸಂದರ್ಭದಲ್ಲಿ, ಮಾಲೀಕನ ಸಮ್ಮತಿ ಇಲ್ಲದೆ ಸಹ ಗುತ್ತಿಗೆಯನ್ನು ಮಂಜೂರು ಮಾಡಬಹುದಾದರೂ, (ಹೆಚ್) ಖಂಡದ ಎರಡನೇ ಪರಂತುಕದಲ್ಲಿ ಸ್ಪಷ್ಟಪಡಿಸಿರುವಂತೆ, ಗಣಿಗಾರಿಕೆ ಗುತ್ತಿಗೆಯನ್ನು ಒಳಗೊಳ್ಳುವ ಖಾಸಗಿ ಮಾಲೀಕತ್ವದ ಪ್ರದೇಶದೊಳಗೆ ಗಣಿಗಾರಿಕೆ ಗುತ್ತಿಗೆ ಹೊಂದಿರುವವನು ಪ್ರವೇಶಿಸುವ ಮೊದಲು, ಗಣಿಗಾರಿಕೆ ಕಾರಚಟುವಟಿಕೆಗಳನ್ನು ಪ್ರಾರಂಭಿಸಲು ಮಾಲೀಕನ ಸಮ್ಮತಿಯನ್ನು ಒದಗಿಸಬೇಕಾಗುತ್ತದೆ.ಆದುದರಿಂದ, ಪ್ರಸ್ತುತ

ಸಂದರ್ಭದಲ್ಲಿಯಂತೆ, ಸರ್ಕಾರವು ಭಾಗಶಃ ಮಾಲೀಕತ್ವ ಹೊಂದಿರುವ ಮತ್ತು ಖಾಸಗಿ ಪಕ್ಷಕಾರನು ಭಾಗಶಃ ಮಾಲೀಕತ್ವ ಹೊಂದಿರುವ ಮತ್ತು ಖನಿಜಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯ ಸಂಬಂಧದಲ್ಲಿ, ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸಿದರೆ, ಖಾಸಗಿ ಮಾಲೀಕತ್ವದ ಭೂಮಿಯ ಸಂಬಂಧದಲ್ಲಿ ಮಾಲೀಕರ ಸಮ್ಮತಿಯನ್ನು ಅರ್ಜಿದಾರನು ಹಾಜರುಪಡಿಸದೆ ಇದ್ದಾಗ ಸಹ, ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಬಹುದು.ಆದಾಗ್ಯೂ, ಖಾಸಗಿ ಪಕ್ಷಕಾರನು ಮಾಲೀಕತ್ವ ಹೊಂದಿದ ಪ್ರದೇಶವನ್ನು ಪ್ರವೇಶಿಸುವ ಮೊದಲು, ಗಣಿಗಾರಿಕೆ ಕಾರಾಚರಣೆಗಳನ್ನು ಪ್ರಾರಂಭಿಸಲು ಮಾಲೀಕನ ಸಮ್ಮತಿಯನ್ನು ಗುತ್ತಿಗೆದಾರನು ಒದಗಿಸಬೇಕಾಗುತ್ತದೆ.ಆದುದರಿಂದ, ಪ್ರಸ್ತುತ ಸಂದರ್ಭದಲ್ಲಿ, ಮಾಲೀಕನ ಸಮ್ಮತಿ ಇಲ್ಲವೆಂಬ ಕಾರಣ ಮಾತ್ರದಿಂದ, 37.77 ಎಕರೆಗಳ ಪ್ರದೇಶದ ಸಂಬಂಧದಲ್ಲಿನ ಗುತ್ತಿಗೆಯನ್ನು ರದ್ದುಪಡಿಸಲಾಗುವುದಿಲ್ಲ.

8. ಈಗ, ಯಾವುದೇ ಪರಿಹಾರವನ್ನು ನಿರ್ಧರಿಸುತ್ತಿಲ್ಲ ಮತ್ತು ಮೂರನೇ ಪ್ರತ್ಯರ್ಜಿದಾರರಿಗೆ ಸಂದಾಯ ಮಾಡುತ್ತಿಲ್ಲವೆಂಬ ಅರ್ಜಿದಾರರ ಎರಡನೇ ವಾದಕ್ಕೆ ಸಂಬಂಧಿಸಿದಂತೆ ನಾವು ವ್ಯವಹರಿಸುವುದಾದರೆ, 37.77 ಎಕರೆಗಳ ವಿಸ್ತೀರ್ಣದ ಪ್ರದೇಶದ ಜಮೀನಿನಲ್ಲಿ ಪ್ರವೇಶಿಸುವ ಹಕ್ಕನ್ನು ಅರ್ಜಿದಾರರು ಹೊಂದಿರುತ್ತಾರೆ.

1957 ರ 24 ಎ ಪ್ರಕರಣದ ಕಡೆಗೆ ನಾವು ಗಮನ ಹರಿಸುವ ಮೊದಲು, 22 ನೇ ನಿಯಮದ ( 3) ನೇ ಉಪ-ನಿಯಮದ (ಹೆಚ್) ಖಂಡದ ಎರಡನೇ ಪರಂತುಕದ ಕಾರಣದಿಂದ, ಗುತ್ತಿಗೆಯ ವಸ್ತುವಿಷಯವಾಗಿರುವ ಖಾಸಗಿ ಮಾಲೀಕತ್ವದ ಭೂಮಿಯನ್ನು ಪ್ರವೇಶಿಸುವುದಕ್ಕೆ ಮೊದಲು, ಗಣಿಗಾರಿಕೆ ಕಾರಾಚರಣೆಗಳನ್ನು ಪ್ರಾರಂಭಿಸಲು ಮಾಲೀಕನ ಸಮ್ಮತಿಯನ್ನು ಪಡೆಯಲೇಬೇಕು.ಗುತ್ತಿಗೆ ಮಂಜೂರಾತಿಗೆ ಮೊದಲಾಗಲಿ ಅಥವಾ ಗುತ್ತಿಗೆ ಮಂಜೂರಾತಿ ನಂತರವಾಗಲಿ, ಆದರೆ ಸಂಬಂಧಪಟ್ಟ ಪ್ರದೇಶವನ್ನು ಪ್ರವೇಶಿಸವ ಮೊದಲು, ಅಂಥ ಸಮ್ಮತಿಯನ್ನು ಪಡೆಯಬೇಕಾದ ಅಗತ್ಯವಿದೆ.22 ನೇ ನಿಯಮದ ( 3) ನೇ ಉಪ-ಪ್ರಕರಣದ (ಹೆಚ್) ಖಂಡದಲ್ಲಿ ' ಮಾಲೀಕ ಎಂಬ ಪದವನ್ನು ಬಳಸಲಾಗಿದೆಯೇ ಹೊರತು ' ಅಧಿಭೋಗದಾರ ' ಎಂಬ ಪದವನ್ನಲ್ಲ ಎಂಬುದು ಇಲ್ಲಿ ನಾವು ಗಮನಿಸಲೇಬೇಕಾದ ವಿಷಯವಾಗಿದೆ.

9. 1957 ರ ಸದರಿ ಅಧಿನಿಯಮದ 24 ಎ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

" 24 ಎ. ಅನ್ವೇಷಣಾ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆ ಹೊಂದಿರುವವನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು.- ( 1) ಈ ಅಧಿನಿಯಮದ ಮತ್ತು ಅದರಡಿ ರಚಿತವಾದ ನಿಯಮಗಳ ಅಡಿಯಲ್ಲಿ ಸ್ಥಳಾನ್ವೇಷಣೆ ಪರವಾನಗಿ, ಅನ್ವೇಷಣಾ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ನೀಡುವ ಕುರಿತಂತೆ, ಯಾವ ಭೂಮಿಯ ಸಂಬಂಧದಲ್ಲಿ ಅಂಥ ಪರವಾನಗಿ, ಲೈಸೆನ್ಸ್ ಅಥವಾ ಗುತ್ತಿಗೆಯನ್ನು ನೀಡಲಾಗಿದೆಯೋ ಆ ಭೂಮಿಯನ್ನು ಪ್ರವೇಶಿಸುವ ಅಂಥ ಪರವಾನಗಿ, ಲೈಸೆನ್ಸ್ ಅಥವಾ ಗುತ್ತಿಗೆ ಹೊಂದಿರುವವನಿಗೆ, ಆತನ ಏಜಂಟನಿಗೆ ಅಥವಾ ನೌಕರನಿಗೆ ಅಥವಾ ಕೆಲಸಗಾರರಿಗೆ, ಅದು ಚಾಲನೆಯಲ್ಲಿರುವ ಎಲ್ಲಾ ಸಮಯದಲ್ಲಿ ಮತ್ತು ನಿಯಮಿಸಬಹುದಾದಂತೆ ಅಂಥ ಎಲ್ಲಾ ಸ್ಥಳಾನ್ವೇಷಣೆ, ಅನ್ವೇಷಣೆ ಅಥವಾ ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸುವುದು ಕಾನೂನುಬದ್ಧವಾಗಿರತಕ್ಕದ್ದು.

ಪರಂತು, ಯಾರೇ ವ್ಯಕ್ತಿಯು, ಯಾವುದೇ ಕಟ್ಟಡದೊಳಗೆ ಅಥವಾ ವಾಸದ ಸ್ಥಳಕ್ಕೆ ಹೊಂದಿಕೊಂಡಿರುವ ಆವರಿತ ಆವರಣಕ್ಕೆ ಅಥವಾ ಉದ್ಯಾನಕ್ಕೆ ಪ್ರವೇಶಿಸುವ ಆತನ ಉದ್ದೇಶವನ್ನು ಅಂಥ ಅಧಿಭೋಗದಾರನಿಗೆ ಮೊದಲೇ ಕನಿಷ್ಠಪಕ್ಷ ಏಳು ನೋಟೀಸನ್ನು ನೀಡದೆ ಪ್ರವೇಶಿಸತಕ್ಕದ್ದಲ್ಲ.

(2) ಉಪ-ಪ್ರಕರಣದ ( 1) ರಲ್ಲಿ ಉಲ್ಲೇಖಿಸಿರುವ ಸ್ಥಳಾನ್ವೇಷಣೆಯ ಪರವಾನಗಿ, ಅನ್ವೇಷಣಾ ಲೈಸೆನ್ಸ್ ಅಥವಾ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವನು, ಸ್ಥಳಾನ್ವೇಷಣೆ, ಗಣಿಗಾರಿಕೆ ಅಥವಾ ಅನ್ವೇಷಣಾ ಕಾರಾಚರಣೆಗಳಿಂದ ಅಥವಾ ಆ ಪರಿಣಾಮವಾಗಿ ಉದ್ಭವಿಸುವ ಸಂಭವವಿರುವ ಅಥವಾ ಉದ್ಭವಿಸುವ ಯಾವುದೇ ನಷ್ಟ ಅಥವಾ ಹಾನಿಗೆ, ಅಂಥ ಪರವಾನಗಿ, ಲೈಸೆನ್ಸ್ ಅಥವಾ ಗುತ್ತಿಗೆ ಅಡಿಯಲ್ಲಿ ಮಂಜೂರು ಮಾಡಿದ ಜಮೀನಿನ ಮೇಲ್ಭಾಗದ ಅಧಿಭೋಗದಾರನಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(3) ಉಪ-ಪ್ರಕರಣ (2) ರ ಅಡಿಯಲ್ಲಿ ಸ ಂ ದಾಯ ಮಾಡಬಹುದಾದ ಪರಿಹಾರದ ಮೊತ್ತವನ್ನು, ನಿಯಮಿಸಬಹುದಾದ ರೀತಿಯಲ್ಲಿ ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು. "

( 1) ನೇ ಉಪ-ಪ್ರಕರಣವು, ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸುವುದಕ್ಕಾಗಿ ಗುತ್ತಿಗೆಯು ಚಾಲ್ತಿಯಲ್ಲಿರುವ ಎಲ್ಲಾ ಅವಧಿಯಲ್ಲಿ ಗುತ್ತಿಗೆಯನ್ನು ಮಂಜೂರು ಮಾಡಿರುವುದರ ಆಧಾರದ ಮೇಲೆ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವನಿಗೆ, ಆತನ ಏಜಂಟರಿಗೆ ಅಥವಾ ಆತನ ಸೇವಕರಿಗೆ ಅಥವಾ ಕೆಲಸಗಾರರಿಗೆ ಜಮೀನುಗಳನ್ನು ಪ್ರವೇಶಿಸಲು ಹಕ್ಕನ್ನು ನೀಡುತ್ತದೆ.ಗುತ್ತಿಗೆಯ ವಸ್ತುವಿಷಯವಾಗಿರುವ ಜಮೀನಿನ ಮೇಲೆ ಯಾವುದೇ ಕಟ್ಟಡ ಅಥವಾ ವಾಸದ ಮನೆ ಇದ್ದರೆ, ಗಣಿಗಾರಿಕೆ ಗುತ್ತಿಗೆ ಹೊಂದಿರುವವನು ಅಂಥ ಕಟ್ಟಡ ಅಥವಾ ವಾಸದ ಮನೆಗೆ ಹತ್ತಿಕೊಂಡಿರುವ ಯಾವುದೇ ಅಂಗಳದಲ್ಲಿ ಅಥವಾ ಉದ್ಯಾನದಲ್ಲಿ, ಅಧಿಭೋಗದಾರನ ಸಮ್ಮತಿಯ ಹೊರತು ಪ್ರವೇಶಿಸಲು ಹಕ್ಕುಳ್ಳವನಾಗಿರುವುದಿಲ್ಲ ಎಂಬುದನ್ನು (1) ನೇ ಉಪ-ಪ್ರಕರಣದ ಪರಂತುಕವು ಸ್ಪಷ್ಟಪಡಿಸುತ್ತದೆ.ಗಣಿಗಾರಿಕೆ ಕಾರಾಚರಣೆಗಳ ಪರಿಣಾಮದಿಂದ ಅಥವಾ ಪರಿಣಾಮದಲ್ಲಿ ಉದ್ಭವಿಸುವ ಸಂಭವವಿರುವ ಅಥವಾ ಉದ್ಭವಿಸುವ, ಯಾವುದೇ ನಷ್ಟ ಅಥವಾ ಹಾನಿಗೆ ಗುತ್ತಿಗೆ ಅಡಿಯಲ್ಲಿ ಮಂಜೂರು ಮಾಡಿದ ಭೂಮಿಯ ಮೇಲ್ಭಾಗದ ಅಧಿಭೋಗದಾರನಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಹಾರವನ್ನು ಸಂದಾಯ ಮಾಡಲು ಗಣಿಗಾರಿಕೆ ಗುತ್ತಿಗೆದಾರನು ಹೊಣೆಗಾರನಾಗಿದ್ದಾನೆಂದು ಈ (2) ನೇ ಉಪ-ಪ್ರಕರಣವು ಉಪಬಂಧಿಸುತ್ತದೆ.ಅಧಿಭೋಗದಾರನು ಮಾಲೀಕನಿಂದ ವಿಭಿನ್ನವಾಗಿರುತ್ತಾನೆ ಎಂಬುದಕ್ಕೆ ಈ ಉಪಬಂಧವು ಅನ್ವಯವಾಗುತ್ತದೆ.ಈ ಪ್ರದೇಶದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವ ವ್ಯಕ್ತಿಯ ಪ್ರವೇಶವನ್ನು ( 1) ನೇ ಉಪ-ಪ್ರಕರಣದ ಪರಂತುಕವು ಅನುಮತಿಸುತ್ತದೆಯಾದ್ದರಿಂದ ಈ ಈ ಉಪಬಂಧವನ್ನು ರಚಿಸಲಾಗಿದೆ.1960 ರ ಸದರಿ ನಿಯಮಗಳ 72 ನೇ ನಿಯಮವು ಅಧಿಭೋಗರದಾನಿಗೆ ಪರಿಹಾರ ಸಂದಾಯದ ಬಗ್ಗೆ ಪುನಃ ಹೇಳುತ್ತದೆ.ಈ ಮೊದಲೇ ಗಮನಿಸಲಾದಂತೆ, 22 ನೇ ನಿಯಮದ ( 3) ನೇ ಉಪ-ನಿಯಮದ (ಹೆಚ್) ಖಂಡವು, ವಿವಿಧ ಸ್ಥಳಗಲ್ಲಿ ' ಮಾಲೀಕ ' ಪದವನ್ನು ಉಲ್ಲೇಖಿಸುತ್ತದೆ.ಆದಾಗ್ಯೂ, 72 ನೇ ನಿಯಮದಲ್ಲಿ, ವಿಧಾನ ಮಂಡಲವು/ಶಾಸಕಾಂಗವು " ಅಧಿಭೋಗದಾರ ' ಪದವು ' ಮಾಲೀಕ ' ಪದದಿಂದ ವಿಭಿನ್ನವಾಗಿರುವುದನ್ನು ಉಲ್ಲೇಖಿಸುತ್ತದೆ.

10. 1957 ರ ಸದರಿ ಅಧಿನಿಯಮದ ಅಥವಾ 1960 ರ ಸದರಿ ನಿಯಮಗಳ ಅಡಿಯಲ್ಲಿ ಅಧಿಭೋಗದಾರ ' ಪದವನ್ನು ಪರಿಭಾಷಿಸಿರುವುದಿಲ್ಲ.ಆದಾಗ್ಯೂ ನಾವು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಅಡಿಯಲ್ಲಿ ಸಹ, 6 " ಅಧಿಭೋಗದಾರ ' ಪದವನ್ನು ಪರಿಭಾಷಿಸಿಲ್ಲವಾದರೂ, ' ಅಧಿಭೋಗದಾರ ' ಪದವನ್ನು ಜಮೀನಿನ ವಾಸ್ತವ ಸ್ವಾಧೀನದಲ್ಲಿರುವವನು ಎಂಬ ಅರ್ಥದಲ್ಲಿ ಪರಿಭಾಷಿಸಿದೆ ಎಂಬುದನ್ನು ನಾವು ಗಮನಿಸಬಹುದಾಗಿದೆ.ಇದಲ್ಲದೆ, 1960 ರ ಸದರಿ ನಿಯಮಗಳು, ' ಅಧಿಭೋಗದಾರ ' ಮತ್ತು ' ಮಾಲೀಕ ' ಪದಗಳ ನಡುವೆ ವ್ಯತ್ಯಾಸವನ್ನು ಮಾಡುತ್ತವೆ.ಆದುದರಿಂದ, 22 ನೇ ನಿಯಮದ ( 3) ನೇ ಉಪ-ನಿಯಮದ (ಹೆಚ್) ಖಂಡದ ಎರಡನೇ ಪರಂತುಕದ ದೃಷ್ಟಿಯಲ್ಲಿ, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಖನಿಜಗಳಿರುವ ಖಾಸಗಿ ಜಮೀನಿನ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ಹೊಂದಿರುವವನು, ಗಣಿಗಾರಿಕೆ ಕಾರಾಚರಣೆಗಳನ್ನು ಪ್ರಾರಂಭಿಸಲು ಮಾಲೀಕನ ಸಮ್ಮತಿಯನ್ನು ಒದಗಿಸದೇ ಖಾಸಗಿ ಮಾಲೀಕತ್ವದ ಪ್ರದೇಶವನ್ನು ಪ್ರವೇಶಿಸಲು ಹಕ್ಕುಳ್ಳವನಾಗಿರುವುದಿಲ್ಲ.

11. ಅರ್ಜಿದಾರರು ನಮಗೆ ನೀಡಲು ಬಯಸಿರುವ ಅರ್ಥವನ್ನೇ, 1960 ರ ಸದರಿ ನಿಯಮಗಳ 72 ನೇ ನಿಯಮದೊಂದಿಗೆ ಓದಲಾದ 24 ಎ ಪ್ರಕರಣದ ( 2) ನೇ ಉಪ-ಪ್ರಕರಣದ ಉಪಬಂಧಗಳು ನೀಡಿದ್ದರೆ, ಅದು ಭಾರತ ಸಂವಿಧಾನದ 300 ಎ ಅನುಚ್ಛೇದದ ಅಡಿಯಲ್ಲಿ, ವಿಶೇಷವಾಗಿ, ಪರಿಹಾರದ ಗಣನೆಗೆ ಸಂಬಂಧಿಸಿದ ಪರಂತುಕಗಳು, ಪರಿಹಾರದ ನಿರ್ಧರಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮಾಲೀಕನಿಗೆ ಅವಕಾಶವನ್ನು ನೀಡದಿದ್ದಾಗ, ಮಾಲೀಕನ ಸಾಂವಿಧಾನಿಕ ಹಕ್ಕಿನ ಉಲ್ಲಂಘನೆಯಾಗುತ್ತದೆ.

12. ಈಗ, 1960 ರ ಸದರಿ ನಿಯಮಗಳ 37 ನೇ ನಿಯಮವನ್ನಾಧರಿಸಿ, ಮೂರನೇ ಪ್ರತ್ಯರ್ಜಿದಾರರಿಗೆ ಮಾನ್ಯ ಹಿರಿಯ ನ್ಯಾಯವಾದಿಗಳು ಪ್ರತಿಪಾದಿಸಿದ ವಾದಕ್ಕೆ ಬಂದಲ್ಲಿ, ಅರ್ಜಿದಾರನ ಪರವಾಗಿ ರಾಜ್ಯ ಸರ್ಕಾರವು ಅನುಮತಿಸಿದ ಗುತ್ತಿಗೆ ವರ್ಗಾವಣೆ ಬಗ್ಗೆ ಕುಂದು-ಕೊರತೆಯನ್ನು ಮುಂದಿಡಲು ಇದು ಅತ್ಯಂತ ವಿಳಂಬವಾದ ದಿನವಾಗಿದೆ.ವರ್ಗಾವಣೆ ಪತ್ರವನ್ನು 29 ನೇ ಆಗಸ್ಟ, 2002 ರಂದು ಬರೆದಿದ್ದಾಗ್ಯೂ, 14 ವರ್ಷಗಳ ಕಾಲಾವಧಿಯಲ್ಲಿ, 37 ನೇ ನಿಯಮದ ಉಲ್ಲಂಘನೆಯ ಕಾರಣದ ಮೇಲೆ ವರ್ಗಾವಣೆ ಪತ್ರವನ್ನು ಪ್ರಶ್ನಿಸಲು ಮೂರನೇ ಪ್ರತ್ಯರ್ಜಿದಾರರು ಯಾವುದೇ ಪ್ರಯತ್ನವನ್ನು ಮಾಡಿದ್ದಾರೆಂದು ತೋರಿಸಲು ದಾಖಲೆಯಲ್ಲಿ ಏನನ್ನೂ ಮಂಡಿಸಿರುವುದಿಲ್ಲ.ಆದುದರಿಂದ, ಸದರಿ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

13. ಮೂರನೇ ಪ್ರತ್ಯರ್ಜಿದಾರರು ಸಲ್ಲಿಸಿದ 2016 ರ ರಿಟ್ ಅರ್ಜಿಸಂಖ್ಯೆ: 60531 ರಲ್ಲಿ ಹೊರಡಿಸಿದ ಆದೇಶವನ್ನು ಮೂರನೇ ಪ್ರತ್ಯರ್ಜಿದಾರರು ಅವಲಂಬಿಸಿದಾಗ್ಯೂ, ಪ್ರಸ್ತುತ ಅರ್ಜಿದಾರ ಕಂಪನಿಯು ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಅವರ ಎಲ್ಲಾ ವಾದಗಳನ್ನು ಮಂಡಿಸಲು ಮೂರನೇ ಪ್ರತ್ಯರ್ಜಿದಾರರಿಗೆ ಅನುಮತಿಯನ್ನು ನೀಡಲಾಗಿತ್ತೆಂದು ಸದರಿ ಆದೇಶದಿಂದ ನಮಗೆ ಕಂಡುಬರುತ್ತದೆ.ಸದರಿ ಆದೇಶವನ್ನು ಅವಲೋಕಿಸಲಾಗಿ, ಮೂರನೇ ಪ್ರತ್ಯರ್ಜಿದಾರರು ಸಲ್ಲಿಸಿದ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗೆ ಸಲ್ಲಿಸಿದ ಅರ್ಜಿಯನ್ನು, 1957 ರ ಸದರಿ ಅಧಿನಿಯಮದ 10 ಎ ಪ್ರಕರಣದ ನಿಬಂಧನೆಗಳನುಸಾರ ಅನರ್ಹವೆಂಬುದಾಗಿ ನಿರ್ಣಯಿಸಲಾಗಿದೆ ಎಂದು ಸದರಿ ಆದೇಶವು ನಿರ್ಣಯಿಸಿದಷ್ಟರಮಟ್ಟಿಗೆ ಮಾತ್ರ ಮೂರನೇ ಪ್ರತ್ಯರ್ಜಿದಾರರು 14 ನೇ ಸೆಪ್ಟೆಂಬರ್, 2016 ರ ಆದೇಶವನ್ನು ಪ್ರಶ್ನಿಸಿದ್ದಾರೆಂದು ಕಂಡುಬರುತ್ತದೆ.ಹಾಗಾಗಿ, ಸದರಿ ಅರ್ಜಿಯಲ್ಲಿಯೂ ಸಹಿತ, 29 ನೇ ಆಗಸ್ಟ್, 2002 ಕ್ಕಿಂತ ಬಹಳ ಹಿಂದೆಯೇ ಪರಿಣಾಮಕಾರಿಯಾಗಿದ್ದ ಗುತ್ತಿಗೆಯ ವರ್ಗಾವಣೆಗೆ ಮೂರನೇ ಪ್ರತ್ಯರ್ಜಿದಾರರಿಂದ ಯಾವುದೇ ಮೂಲ ಪ್ರಶ್ನೆ ಇರಲಿಲ್ಲ.

14. ಆದ್ದರಿಂದ, ಮೇಲೆ ದಾಖಲಿಸಿದ ಕಾರಣಗಳಿಗಾಗಿ, ಸದರಿ 37.77 ಎಕರೆಗಳ ಪ್ರದೇಶವನ್ನು ಬಿಟ್ಟುಬಿಡುವ ಆದೇಶವು ಕಾನೂನಿನ ದೃಷ್ಟಿಯಿಂದ ದೋಷಪೂರ್ಣವಾದುದಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

15. ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ತಮಿಳುನಾಡು ರಾಜ್ಯ -ವಿರುದ್ಧ ಎಮ್.ಪಿ.ಪಿ. ಕಾವೇರಿ ಚೆಟ್ಟ ' ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದ್ದಾರೆ.ಅವರು ಸದರಿ ಚ ನಿರ್ಣಯದ 14 ನೇ ಕಂಡಿಕೆಯಲ್ಲಿನ ನಿರ್ಣಯನ್ನು ಅವಲಂಬಿಸಿದ್ದಾರೆ.ಅವರು, ಪಲ್ಲವ ಗ್ರಾನೈಟ್ಸ್ ಇಂಡಸ್ಟ್ರಿಯಲ್ ಇಂಡಿಯ (ಪ್ರೈ) ಅಮಿಟೆಡ್ -ವಿರುದ್ಧ-ಆಂಧ್ರ ಪ್ರದೇಶ ಸರ್ಕಾರ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತರುವಾಯದ ನಿರ್ಣಯದೆಡೆಗೆ ಸಹ ನಮ್ಮ ಗಮನವನ್ನು ಸೆಳೆದಿದ್ದಾರೆ.ಎಮ್.ಪಿ.ಪಿ. ಕಾವೇರಿ ಚೆಟ್ಟಿ ಮೊಕದ್ದಮೆಯಲ್ಲಿನ ನಿರ್ಣಯವನ್ನು ಮೂವರು ಮಾನ್ಯ ನ್ಯಾಯಾಧೀಶರ ಪೀಠವು ನೀಡಿದ್ದು, ಪಲ್ಲವ ಗ್ರಾನೈಟ್ಸ್ ಮೊಕದ್ದಮೆಯಲ್ಲಿನ ತರುವಾಯದ ನಿರ್ಣಯವನ್ನು ಮಾನ್ಯ ಇಬ್ಬರು ನ್ಯಾಯಾಧೀಶರ ಪೀಠವು ನೀಡಿದೆ ಎಂದು ಎಂದು ಅವರು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ, ಎಮ್.ಪಿ.ಪಿ. ಕಾವೇರಿ ಚೆಟ್ಟ ಮೊಕದ್ದಮೆಯಲ್ಲಿನ ನಿರ್ಣಯವನ್ನು ತರುವಾಯದ ನಿರ್ಣಯದಲ್ಲಿ ಪರಿಗಣಿಸಿರುವುದಿಲ್ಲವೆಂದು ಮತ್ತು ಅದರಿಂದಾಗಿ, ಯಾವುದು ಅನ್ವಯವಾಗುವುದೋ ಅದು ಮತ್ತು ಈ ನ್ಯಾಯಾಲಯಕ್ಕೆ ಯಾವುದು ಬಂಧನಾಕಾರಿಯಾಗುವುದೋ ಅದು ಮೇಲೆ ಹೇಳಿದ ಎಮ್.ಪಿ.ಪಿ. ಕಾವೇರಿ ಚೆಟ್ಟ ಮೊಕದ್ದಮೆಯಲ್ಲಿನ ನಿರ್ಣಯವಾಗಿದೆ ಎ ಂ ದು ಸಹ ನಿವೇದಿಸಿಕೊಂಡಿದ್ದಾರೆ.

16. ಎರಡೂ ನಿರ್ಣಯಗಳನ್ನು ಸಹ ನಾವು ಜಾಗರೂಕತೆಯಿಂದ ಪರಿಗಣಿಸಿದ್ದೇವೆ.ಎಮ್.ಪಿ.ಪಿ ಕಾವೇರಿ ಚೆಟ್ಟ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದಿಟ್ಟ ಪ್ರಶ್ನೆಯು, ಮದ್ರಾಸ್ ಉಚ್ಚ ನ್ಯಾಯಾಲಯದ ತೀರ್ಪು ಆಗಿದ್ದು, ಅದರ ಮೂಲಕ ಗಣಿಗಳು ಮತ್ತು ಖನಿಜಗಳ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1957 ರ ಉಪಬಂಧಗಳ ಅಡಿಯಲ್ಲಿ ರಚಿಸಿದ ತಮಿಳುನಾಡು ಸಣ್ಣ ಖನಿಜಗಳ ರಿಯಾಯಿತಿ ನಿಯಮಗಳು, 1959 ರ 8-ಡಿ, 19-ಬಿ ನಿಯಮಗಳು ಮತ್ತು 19 ಎ ನಿಯಮದ ಭಾಗವು ಅಸಂವಿಧಾನಿಕವೆಂದು ಸಾಧಿತವಾಗಿತ್ತು.10 ನೇ ಜೂನ್, 1992 ರಿಂದ, ರೈತವಾರಿ ಜಮೀನುಗಳಲ್ಲಿ ಸಣ್ಣ ಖನಿಜಗಳನ್ನು ತೆಗೆಯಲು ಗುತ್ತಿಗೆಯನ್ನು ಮಂಜೂರು ಮಾಡುವಾಗ, ರಾಜ್ಯ ಸರ್ಕಾರದ ಕಂಪನಿಗೆ ಅಥವಾ ರಾಜ್ಯ ಸರ್ಕಾರವು ಮಾಲೀಕತ್ವ ಹೊಂದಿದ ಅಥವಾ ಅದರ ನಿಯಂತ್ರಣದಲ್ಲಿರುವ ನಿಗಮ ಅಥವಾ ಕಂಪನಿಗೆ ರಾಜ್ಯ ಸರ್ಕಾರವು ಆದ್ಯತೆಯನ್ನು ನೀಡತಕ್ಕದ್ದು ಎಂದು 19-ಎ ನಿಯಮದ.19- ಎ ನಿಯಮದ ಮೊದಲನೇ ಪರಂತುಕದ ಸಂದರ್ಭದಲ್ಲಿ, ಸರ್ವೋಚ್ಚ ನ್ಯಾಯಾಲಯವು, 14 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ:

14. 19- ಎ ನಿಯಮದ ಮೊದಲನೇ ಪರಂತುಕದ ಅಡಿಯಲ್ಲಿ, ಜಮೀನಿನ ಮಾಲೀಕನ ಸಮ್ಮತಿಯನ್ನು ಷರತ್ತನ್ನಾಗಿಸಿರುವುದಿಲ್ಲ ಹಾಗೂ ಕಾರಣದಿಂದ ಕಾನೂನಿನ ದೃಷ್ಟಿಯಲ್ಲಿ ಇದು ದೋಷಪೂರ್ಣವಾಗಿದೆ ಎಂದು ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಈ ನಿವೇದನೆಯಲ್ಲಿ ಸದರಿ ಅಧಿನಿಯಮದ 24- ಎ ಪ್ರಕರಣವನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ.ಅದರ ಅಡಿಯಲ್ಲಿ, ಸದರಿ ಅಧಿನಿಯಮದ ಅಥವಾ ಅದರಡಿ ರಚಿತವಾದ ನಿಯಮಗಳ ಮೇರೆಗೆ ಗಣಿ ಗುತ್ತಿಗೆದಾರನು, ಗುತ್ತಿಗೆಯನ್ನು ನೀಡಲಾಗಿರುವ ಜಮೀನನ್ನು ಪ್ರವೇಶಿಸಲು ಮತ್ತು ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸಲು ಅಧಿಕಾರ

ಹೊಂದಿದ್ದಾನೆ.ಆತನ ಕಾರಾಚರಣೆಗಳಿಂದ ಉಂಟಾಗುವಂಥ ಯಾವುದೇ ನಷ್ಟ ಅಥವಾ ಹಾನಿಗಾಗಿ ಭೂ ಮಾಲೀಕನಿಗೆ ಪರಿಹಾರ ನೀಡಲು ಆತನು ಹೊಣೆಗಾರನಾಗಿದ್ದಾನೆ.ಗುತ್ತಿಗೆದಾರನು ಯಾವುದೇ ಕಟ್ಟಡ ಅಥವಾ ಸುತ್ತುವರಿದ ಅಂಗಳ ಅಥವಾ ಉದ್ಯಾನವನ್ನು ಪ್ರವೇಶಿಲು ಅಪೇಕ್ಷಿಸಿದಾಗ ಮಾತ್ರವೇ ಅಧಿಭೋಗದಾರನ ಸಮ್ಮತಿ ಅಗತ್ಯವಾಗಿದೆ."

17. 1957 ರ ಸದರಿ ಅಧಿನಿಯಮದ 24 ಎ ಪ್ರಕರಣ ಕಡೆಗೆ ಮಾತ್ರ ಸರ್ವೋಚ್ಚ ನ್ಯಾಯಾಲಯವು ಗಮನ ನೀಡಿದ್ದು, 1960 ರ ಸದರಿ ನಿಯಮಗಳ 22 ನೇ ನಿಯಮದ ( 1) ನೇ ಉಪ-ನಿಯಮದ (ಹೆಚ್) ಖಂಡವು ಅನ್ವಯವಾಗುವ ಮೊಕದ್ದಮೆ ಕುರಿತು ವ್ಯವಹರಿಸಿರುವುದಿಲ್ಲ.ಈ ಅರ್ಜಿಯಲ್ಲಿ ಉದ್ಭವಿಸಿರುವ ವಿವಾದವು, ಸರ್ವೋಚ್ಚ ನ್ಯಾಯಾಲಯದ ಪರಿಗಣನೆಗೆ ಎಂದಿಗೂ ಉದ್ಭವಿಸಿರಲಿಲ್ಲ.

18. ಪಲ್ಲವ ಗ್ರಾನೈಟ್ಸ್ ಮೊಕದ್ದಮೆಯಲ್ಲಿ, 2 ನೇ ಮತ್ತು 3 ನೇ ಕಂಡಿಕೆಗಳಲ್ಲಿ ಸರ್ವೋಚ್ಚ ನ್ಯಾಯಾಲಯ ನಿರ್ಣಯಿಸಿರುವುದು ಇಲ್ಲಿ ಸುಸಂಸಂಗತವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"2. ಮಾನ್ಯ ಹಿರಿಯ ನ್ಯಾಯಾಧೀಶರಾದ ಶ್ರೀ ಸೋಲಿ ಜೆ. ಸೊರಾಬ್ಜಿ ಅವರು ನಮ್ಮ ಮುಂದೆ ಎತ್ತಿದ ಪ್ರಾಥಮಿಕ ವಾದವೆಂದರೆ, ಉಚ್ಚ ನ್ಯಾಯಾಲಯದ ಹಿಂದಿನ ಆದೇಶವಿದ್ದು, ಅದರಲ್ಲಿ, ಗಣಿಗಾರಿಕೆ ಗುತ್ತಿಗೆಯನ್ನು ನೀಡುವ ಮೊದಲು ಭೂಮಾಲೀಕರ ಸಮ್ಮತಿ ಪಡೆಯುವ ಅಗತ್ಯವಿಲ್ಲವೆಂದು ನಿರ್ಣಯಿಸಿಲಾಗಿದೆ ಮತ್ತು ಅದರಿಂದಾಗಿ, ಚಾಲ್ತಿಯಲ್ಲಿರುವ ಆಚರಣೆಯ ಆಧಾರದ ಮೇಲೆ ವಿಭಾಗೀಯ ಪೀಠವು ನೀಡಿದ ನಿರ್ದೇಶನವು ಕಾನೂನಿನ ದೃಷ್ಟಿಯಿಂದ ಸರಿಯಾಗಿರುವುದಿಲ್ಲ ಎ ಂ ಬುದಾಗಿದೆ.

**ಹಕ್ಕು ಒಪ್ಪಂದವನ್ನಾಧರಿಸಿದೆ ; ಗುತ್ತಿಗೆ ನೀಡುವವನು ತನ್ನ** ಸಮ್ಮತಿಯನ್ನು ನೀಡಿದ ಹೊರತು , ಆತನ ಜಮೀನನ್ನು ಪ್ರವೇಶಿಸಲು ಮತ್ತು ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸಲು ಯಾರೇ ಗುತ್ತಿಗೆದಾರನು ಹಕ್ಕನ್ನು ಹೊಂದಿರುವುದಿಲ್ಲ . ಭೂಮಿಯ ಮೇಲ್ಭಾಗದ ಅಡಿಯಲ್ಲಿನ ಖನಿಜಗಳನ್ನು ತೆಗೆಯಲು ಗಣಿಗಾರಿಕೆ ಗುತ್ತಿಗೆಯನ್ನು ನೀಡುವ ಹಕ್ಕು ಭೂಮಾಲೀಕರೊಂದಿಗೆ ಮಾಡಿಕೊಂಡ ಒಪ್ಪಂದಕ್ಕೆ ಒಳಪಟ್ಟಿರುತ್ತದೆ . ಆದುದರಿಂದ , ಗಣಿಗಾರಿಕೆ ಗುತ್ತಿಗೆಯ ಶಾಂತಿಯುತವಾಗಿ ಕಾರನಿರ್ವಹಣೆಯಲ್ಲಿ ಹಾಗೂ ಖನಿಜಗಳನ್ನು ತೆಗೆಯುವ ಕಾವ್ಯಾಚರಣೆಗೆ ಯಾವುದೇ ಅಡೆತಡೆ ಇರಬಾರದು ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ದೃಷ್ಟಿಯಿಂದ , ಭೂಮಾಲೀಕನ ಸಮ್ಮತಿಗೆ ಆಗ್ರಹಿಸುವುದು ಅವಶ್ಯವಾಗಿದೆ . ಆದುದರಿಂದ , ಖಾಸಗಿ ಮಾಲೀಕನಿಂದ ಖನಿಜಗಳನ್ನು ತೆಗೆಯುವ ಈ ವಾದದಲ್ಲಿ ಯಾವುದೇ ಬಲವಿಲ್ಲ ಎಂದು ನಮಗೆ ಕಂಡುಬಂದಿತು.

ನ್ಯಾಯಾಲಯವು ತಾಳಿದ ಅಭಿಪ್ರಾಯದಲ್ಲಿ ಹಸ್ತಕ್ಷೇಪವನ್ನು ಅಗತ್ಯಪಡಿಸುವ ಯಾವುದೇ ಕಾನೂನುಬಾಹಿರತೆ ನಮಗೆ ಕಂಡುಬಂದಿರುವುದಿಲ್ಲ."

(ಒತ್ತು ನೀಡಲಾಗಿದೆ)

ಖಾಸಗಿ ಮಾಲೀಕತ್ವದ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಅರ್ಜಿದಾರರು, ಅರ್ಜಿ ಸಲ್ಲಿಸಿದ್ದಾರೆ; ಅರ್ಜಿದಾರರ ಅರ್ಜಿಯ ಆಧಾರದ ಮೇಲೆ, ನಿರ್ದೇಶಕರು ಆರು ತಿಂಗಳುಗಳ ಅವಧಿಗಾಗಿ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡಿದ್ದಾರೆ; ಆರು ತಿಂಗಳುಗಳ ಗಣಿಗಾರಿಕೆ ಗುತ್ತಿಗೆಯಿಂದ ಬಾಧಿತರಾಗಿ, ಮಾಲೀಕರು, ತಮ್ಮ ಸಮ್ಮತಿ ಇಲ್ಲದೆ ಗುತ್ತಿಗೆಯನ್ನು ಮಂಜೂರು ಮಾಡಲಾಗಿದೆ ಎಂಬ ಕಾರಣದ ಮೇಲೆ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಿದರು; ಪ್ರತ್ಯರ್ಜಿದಾರ ಮಾಲೀಕರ ಸಮ್ಮತಿಯೊಂದಿಗೆ ಮಾತ್ರ ಗುತ್ತಿಗೆಯನ್ನು ಮಂಜೂರು ಮಾಡಬಹುದು ಎಂಬ ನಿರ್ದೇಶನದೊಂದಿಗೆ ಸದರಿ ನಿರ್ಣಯದಲ್ಲಿ ರಿಟ್ ಅರ್ಜಿಯನ್ನು ವಿಲೆ ಮಾಡಲಾಯಿತು.

19. ಪ್ರಸ್ತುತ ಸಂದರ್ಭಕ್ಕೆ ಬಂದಲ್ಲಿ, ಮೂರನೇ ಪ್ರತ್ಯರ್ಜಿದಾರರು ಮಾಲೀಕತ್ವದ ಹಕ್ಕುಗಳನ್ನು ಅರ್ಜಿದಾರರು ವಿವಾದ ಮಾಡಿರುವುದಿಲ್ಲ.ಜಮೀನಿನಲ್ಲಿರುವ ಖನಿಜಗಳು ಸರ್ಕಾರಕ್ಕೆ ಸೇರಿದಾಗ್ಯೂ, ಜಮೀನಿನ ಮಾಲೀಕನ ಸಮ್ಮತಿ ಇಲ್ಲದೆ ಖನಿಜಗಳನ್ನು ತೆಗೆಯಲು ಗುತ್ತಿಗೆಯ ಭಾಗವಾಗಿರುವ ಖಾಸಗಿ ಜಮೀನನ್ನು ಪ್ರವೇಶಿಸಲು ರಾಜ್ಯ ಸರ್ಕಾರವು ಮಂಜೂರು ಮಾಡಿದ ಗಣಿಗಾರಿಕೆ ಗುತ್ತಿಗೆದಾರನಿಗೆ ಸಾಧ್ಯವನ್ನಾಗಿಸಲು, 1957 ರ ಸದರಿ ಅಧಿನಿಯಮದ ಅಡಿಯಲ್ಲಾಗಲಿ ಅಥವಾ 1960 ರ ಸದರಿ ನಿಯಮಗಳ ಅಡಿಯಲ್ಲಾಗಲಿ ಯಾವುದೇ ಉಪಬಂಧವಿಲ್ಲ.

20. ಆದುದರಿಂದ, ಅರ್ಜಿಯು ಭಾಗಶಃ ಸಾಧಿತವಾಗುತ್ತದೆ ಮತ್ತು ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

(6) 37.77 ಎಕರೆಗಳ ವಿಸ್ತೀರ್ಣದ ಸಂಬಂಧದಲ್ಲಿ ಗಣಿಗಾರಿಕೆ ಗುತ್ತಿಗೆಯನ್ನು ರದ್ದುಗೊಳಿಸಿರುವ ಮತ್ತು ಸದರಿ ವಿಸ್ತೀರ್ಣವನ್ನು ಗಣಿಗಾರಿಕೆ ಗುತ್ತಿಗೆಯಿಂದ ತೆಗೆದುಹಾಕಬೇಕು ಎಂಬದಿನಾಂಕ: 14 ನೇ ಸೆಪ್ಟೆಂಬರ್, 2016 ರ ಪ್ರಶ್ನಿತ ಆದೇಶದ ಭಾಗವನ್ನು ಈ ಮೂಲಕ ತಳ್ಳಿಹಾಕಲಾಗಿದೆ.ತತ್ಪರಿಣಾಮವಾಗಿ, 37.77 ವಿಸ್ತೀರ್ಣದ ಪ್ರದೇಶಗಳಲ್ಲಿ ಗಣಿಗಾರಿಕೆ ಹಕ್ಕುಗಳ ಹರಾಜನ್ನು ನಡೆಸುವ 33 ನೇ ಕಂಡಿಕೆಯಲ್ಲಿರುವ ನಿರ್ದೇಶನವನ್ನು ಈ ಮೂಲಕ ತಳ್ಳಿ ಹಾಕಲಾಗಿದೆ;

(ii) ಆದ್ದರಿಂದ, ಯಾವ ಆದೇಶದ ಭಾಗದ ಮೂಲಕ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡದಿರುವುದಕ್ಕಾಗಿ ಮೂರನೇ ಪ್ರತ್ಯರ್ಜಿದಾರರು ಅರ್ಜಿಯನ್ನು ಸಲ್ಲಿಸಿರುವರೋ, ಆ ಭಾಗವನ್ನು ಬದಲಾಯಿಸುವುದಿಲ್ಲ;

(iii) 37.77 ಎಕರೆ ವಿಸ್ತೀರ್ಣದ ಪ್ರದೇಶವು, ಅರ್ಜಿದಾರನಿಗೆ ಮಂಜೂರು ಮಾಡಿದ ಗಣಿಗಾರಿಕೆ ಗುತ್ತಿಗೆಯ ಭಾಗವಾಗುವುದು ಮುಂದುವರಿಯುವುದು, ಮೂರನೇ ಪ್ರತ್ಯರ್ಜಿದಾರರು ಸಮ್ಮತಿ ಇಲ್ಲದೆ ಸದರಿ ಪ್ರದೇಶದಲ್ಲಿ ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸುವಂತಿಲ್ಲ;

(iv) ಇದಲ್ಲದೆ, ಗಣಿಗಾರಿಕೆ ಗುತ್ತಿಗೆಯ ನಿಬಂಧನೆಯಲ್ಲಿ ಗಣಿಗಾರಿಕೆ ಕಾರಾಚರಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಮಾತ್ರ 37.77 ಎಕರೆಗಳ ವಿಸ್ತೀರ್ಣದ ಪ್ರದೇಶದ ಸ್ವಾಧೀನವನ್ನು ಪಡೆಯುವುದಕ್ಕೆ, ಅರ್ಜಿದಾರು ಸ್ವತಃ ಅಥವಾ ರಾಜ್ಯ ಸರ್ಕಾರದ ಮೂಲಕ ಸೂಕ್ತ ವ್ಯವಹರಣೆಯನ್ನು ಪ್ರಾರಂಭಿಸಲು ಸದಾ ಮುಕ್ತರಿರುವರು;

(v) ರಿಟ್ ಅರ್ಜಿಯನ್ನು ಮೇಲಿನ ನಿಬಂಧನೆಗಳನುಸಾರ, ಭಾಗಶಃವಾಗಿ ಪುರಸ್ಕರಿಸಲಾಗಿದೆ.ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.